ಕರ್ನಾಟಕ ವಿಧಾನ ಸಭೆ

ಗುರುವಾರ 17ನೇ ಜೂನ್ 2004ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ

(ಸದನ ಪ್ರಾರಂಭವಾದಾಗ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದರು)

ವಿಷಯ : ಅಕ್ಕಿ ಹಗರಣ ತನಿಖೆ ನಡೆಸಲು ಜಂಟಿ ಸದನ ಸಮಿತಿ ರಚಿಸುವ ಕುರಿತು.

†**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** : ಮಾನ್ಯ ಅಧ್ಯಕ್ಷರೆ, ಸದನ ಸಮಿತಿ ರಚಿಸುವುದಿಲ್ಲವೆಂದು ನಿನ್ನೆ ಹೇಳಿರುವುದರಿಂದ ನಮ್ಮ ಧರಣಿ ಇವೊತ್ತೂ ಸಹ ಮುಂದುವರಿಯಲಿದೆ. ಸದನ ಸಮಿತಿ ರಚಿಸುತ್ತೇವೆಂದು ಸರ್ಕಾರ ಹೇಳುವವರೆಗೂ ನಾವು ಧರಣಿ ಕೈ ಬಿಡಲು ಸಾಧ್ಯವಿಲ್ಲ. ತಮಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ನಾವು ಸದನದ ಮುಂದಿನ ಬಾವಿಯಲ್ಲಿ ನಿಂತು ಧರಣಿ ನಡೆಸಲು ತೀರ್ಮಾನಿಸಿದ್ದೇವೆ, ಸರ್ಕಾರ ಹೆಜ್ಜೆಹೆಜ್ಜೆಗೂ ಹಠ ಮಾಡುತ್ತಿದೆ, ಸರ್ಕಾರದ ಧೋರಣೆ ಸರಿಯಲ್ಲ, ಅದರ ಮೊಂಡುತನ ನಿರಂತರವಾಗಿದೆ, ಇವೊತ್ತಿನ ಬೆಳಗ್ಗಿನವರೆಗೂ ಸಹ ಕೂಲಿಗಾಗಿ ಬಂದಿರುವ ಕಾಳನ್ನು ಕಾಳಸಂತೆಯಲ್ಲಿ ವ್ಯಾಪಾರ ಮಾಡುತ್ತಿದ್ದಾರೆ, ಲಾರಿಗಟ್ಟಲೆ ಲೂಟಿಯಾಗುತ್ತಿದೆ. ದರೋಡೆಯಾಗುತ್ತಿದೆ. ಅನ್ಯಾಯ ನಡೆಯುತ್ತಿದೆ, ಜಿಲ್ಲೆ ಜಿಲ್ಲೆಗಳಲ್ಲಿ ಮೋಸ ನಡೆಯುತ್ತಿದೆ, ಈ ಕುರಿತು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ನನಗನ್ನಿಸುತ್ತದೆ ಇದೊಂದು ಅತ್ಯಂತ ಅಪಾಯಕಾರಿ ಬೆಳವಣಿಗೆ ಸಿಓಡಿ ತನಿಖೆ ನಡೆಸುವುದಾಗಿ ಸರ್ಕಾರ ಒಂದು ಕಡೆ ಹೇಳಿದರೆ, ಮತ್ತೊಂದೆಡೆ ಏನೂ ಆಗಿಲ್ಲವೆಂಬಂತೆ ಸುಮ್ಮನಿದೆ. ಸಿಓಡಿ ತನಿಖೆ ಬಗ್ಗೆ ಗೌರವವಿದೆ, ಆದರೂ ಫಲಪ್ರದವಾಗಿಲ್ಲ. ಎಲ್ಲೆಲ್ಲಿ ನೋಡಿದರೂ ಅನ್ಯಾಯ ನಡೆಯುತ್ತಿದೆ. ಎಲ್ಲಾ ಕಡೆಗಳಲ್ಲೂ ಕೂಲಿಗಾಗಿ ಕಾಳು ಅಕ್ಕಿ ಮೋಸದ ದಂಧೆಯಾಗುತ್ತಿದೆ, ಈ ದಂಧೆ ಕರ್ನಾಟಕ ರಾಜ್ಯದಲ್ಲಿ ಹೆಚ್ಚು-ಕಡಿಮೆ ಪ್ರತಿ ಜಿಲ್ಲೆಯಲ್ಲೂ ನಡೆದಿದೆ. ಇದು ತಾಲ್ಲೂಕು ಮಟ್ಟಕ್ಕೂ ಹಬ್ಬಿದೆ. ಬಹಳ ಅನ್ಯಾಯವಾಗುತ್ತಿದೆ. ನನಗನ್ನಿಸುತ್ತದೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ಇದರ ಬಗ್ಗೆ ಸಾರ್ವಜನಿಕವಾಗಿ, ಸಮಗ್ರ ತನಿಖೆ ಮಾಡಿಸಬೇಕು. ಬಹಿರಂಗ ತನಿಖೆಯಾಗಲೇಬೇಕು. ಆಗ ಮಾತ್ರ ಹಗರಣದಲ್ಲಿರುವ ಅನೇಕ ವಿಷಯಗಳು ಹೊರಗೆ ಬರುತ್ತದೆ. ಸರ್ಕಾರ ಇಲ್ಲವೆಂದು ನನಗನ್ನಿಸುತ್ತದೆ. ಎಲ್ಲಿದೆ ಸರ್ಕಾರ? ಮುಖ್ಯಮಂತ್ರಿ ಇಲ್ಲ, ಉಪ ಮುಖ್ಯಮಂತ್ರಿ ಇಲ್ಲ, ಕೇಳುವವರು ಯಾರೂ ಇಲ್ಲದಂಥ ಪರಿಸ್ಥಿತಿ ನಿರ್ಮಾಣವಾದರೆ ಅದಕ್ಕೆ ನಾವು ಹೊಣೆಯಲ್ಲ. ಇದನ್ನು